# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,

# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:5033/2019** ಪ್ರಾ.ಸಾ-36

ಚಾಸಾ-37

ದಿನಾಂಕ:09-01-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಹೆಸರು | ಮಂಜುನಾಥ |
| ತಂದೆಯ ಹೆಸರು | ರಾಮಯ್ಯ |
| ವಯಸ್ಸು | 35 |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಕೋಡಿಹಳ್ಳಿ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ :-**

ನ್ಯಾಯಾಲಯದ ಮುಂದೆ ಇರುವ ಯಾವ ಆರೋಪಿಯೂ ನನಗೆ ಗೊತ್ತಿಲ್ಲ. ಅವರನ್ನು ನಾನು ಈ ಹಿಂದೆ ನೋಡಿಲ್ಲ. ನಮ್ಮ ಊರಿಗೆ ಫ್ರೀ ಸಿಮ್ ಕೊಡುವ ವಾಹನ ಬಂದಿದ್ದು ನನಗೆ ಗೊತ್ತಿಲ್ಲ. ನಾನು ಆ ರೀತಿ ಯಾವುದೆ ಸಿಮ್ ಖರೀದಿ ಮಾಡಿಲ್ಲ. ನನ್ನ ಓಟರ್ ಐ.ಡಿ, ಕೋಡಿಹಳ್ಳಿಯ ಗ್ರಾಮಕ್ಕೆ ಇದೆ. 2 ವರ್ಷಗಳ ಹಿಂದೆ ಪೊಲೀಸರ ಊರಿಗೆ ಬಂದಿದ್ದರು, ನನಗೆ ಏನು ಗೊತ್ತಿಲ್ಲ ಎಂದು ಹೇಳಿದ್ದೇನೆ. ನಾನು ಪೊಲೀಸ ಮುಂದೆ ಹೇಳಿಕೆ ನೀಡಿಲ್ಲ. ಸಾಕ್ಷಿಗೆ customer application form Bharathi Airtel ಅನ್ನು ತೋರಿಸಿದಾಗ ಸಾಕ್ಷಿ ಅದರಲ್ಲಿ ಇರುವ ಪೋಟೋ ಮತ್ತು ಸಹಿಯನ್ನು ನೋಡಿ ತನ್ನ ಸಹಿ ಎಂದು ಗುರುತಿಸಿದ್ದು ಕಾರಣ ಅದನ್ನು ನಿಪಿ-69 ಎಂದು ಮತ್ತು ಓಟರ್ ಐ.ಡಿ ಕಾರ್ಡ ಅನ್ನು ನೊಡೀ ಅದರಲ್ಲಿ ಇರುವ ಪೋಟೋ ಮತ್ತು ಸಹಿಯನ್ನು

ತನ್ನದೆಂದು ಗುರುತಿಸಿದ ಕಾರಣ ಅದನ್ನು ನಿಪಿ-70 ಎಂದು ಗುರುತಿಸಲಾಯಿತು. ನಿಪಿ-69 ಅನ್ನು ಯಾವಾಗ ನಾನು ನೀಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ನಿಪಿ-70 ಅನ್ನು ಯಾರಿಗೆ ಕೊಟ್ಟಿದ್ದೇನೆ ಎಂದು ಗೊತ್ತಿಲ್ಲ. ಮೊದಲು ನಾನು Airtel sim ಉಪಯೋಗಿಸುತ್ತಿದ್ದೆ ಅದರ ನಂಬರ್ ಗೊತ್ತಿಲ್ಲ. ಆ sim ಕಳೆದುಹೋಗಿದೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :-</u>**

ನನಗೆ 2 ನೇ ಆರೋಪಿ ಜಗದೀಶ ಗೊತ್ತು ಎಂದರೆ ಸರಿಯಲ್ಲ. ಅವನು ನನ್ನ ಜೊತೆ ಕೂಲಿ ಕೆಲಸಕ್ಕೆ ಬರುತ್ತಿದ್ದ ಎಂದು ನಾನು ಪೊಲೀಸರಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. 2011 ನೇ ಇಸವಿಯಲ್ಲಿ ನಮ್ಮ ಊರಿಗೆ Airtel ನ ಫ್ರೀ ಸಿಮ್ ವಾಹನ ಬಂದಿತ್ತು ಎಂದರೆ ಗೊತ್ತಿಲ್ಲ. ಆ ಸಮಯದಲ್ಲಿ 2 ನೇ ಆರೋಪಿ ನನ್ನ ಬಳಿ ಬಂದು ನನ್ನ ಓಟರ್ ಐ.ಡಿ ಉಪಯೋಗಿಸಿ ಒಂದು ಫ್ರೀ ಸಿಮ್ ಕೊಡಿಸು ಎಂದು ಕೇಳಿದ ಎಂದರೆ ಸರಿಯಲ್ಲ. ಆಗ ನಾನು 2 ನೇ ಆರೋಪಿ ನನಗೆ ಪರಿಚಿತನಾದ ಕಾರಣ ನನ್ನ ಓಡಿರ್ ಐ.ಡಿ ಅನ್ನು ನೀಡಿ ಒಂದು ಫ್ರೀ ಸಿಮ್ ಅನ್ನು ಖರೀದಿಸಿ 2 ನೇ ಆರೋಪಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆಗ ನಾನು Airtel ಫೋನ್ ನಂಬರ್.9740645351 ಸಿಮ್ ಅನ್ನು ಖರೀದಿಸಿ 2 ನೇ ಆರೋಪಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ಬಳಿಕ ಆ ಸಿಮ್ ಆತನ ಬಳಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಬಳಿಕ ಆರೋಪಿಗಳೆಲ್ಲಾರೂ ಆ ಸಿಮ್ ಅನ್ನು ಬಳಿಸಿ ಒಂದು ಕೊಲೆ ಪ್ರಕಾರಣದಲ್ಲಿ ಭಾಗಿಯಾಗಿದ್ದರು ಎಂಬ ವಿಚಾರ ನನಗೆ ತಿಳಿಯಿತು ಎಂದರೆ ಸರಿಯಲ್ಲ. ನನಗೆ ಪೊಲೀಸರು ಈ ವಿಚಾರವನ್ನು ಹೇಳಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ, ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ-70 ಓಟರ್ ಐ.ಡಿ ಕಾರ್ಡ ನೀಡಿ ನಿಪಿ-69 ರಂತೆ application ಹಾಕಿ ಒಂದು ಸಿಮ್ ಕಾರ್ಡ ಅನ್ನು ಖರೀದಿಸಿ 2 ನೇ ಆರೋಪಿ ನೀಡಿದ್ದೇನೆ ಎಂದರೆ

ಸರಿಯಲ್ಲ. ಸಾಕ್ಷಿ ದಿನಾಂಕಃ23-01-2019 ರ ಹೇಳಿಕೆಯನ್ನು ನಿರಾಕರಿಸಿದ ಕಾರಕಣ ಸದರಿ ಹೇಳಿಕೆಯನ್ನು ನಿಪಿ-71 ಎಂದು ಗುರುತಿಸಲಾಯಿತು. ನಾನು ಸಿಮ್ ಅನ್ನು ತೆಗೆದುಕೊಂಡು 2 ನೇ ಆರೋಪಿ ನೀಡಿದ್ದು ಮತ್ತು ಅದನ್ನು ಅವನು ಬಳಸುತ್ತಿದ್ದ ವಿಚಾರ ಗೊತ್ತಿದ್ದರೂ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪೊಲೀಸರು ವಿಚಾರಣೆ ಮಾಡಿದಾಗ ನಿಪಿ-71 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು ಶ್ರೀ.TSK ವಕೀಲರಿಂದ ಆರೋಪಿಗಳ ಪರವಾಗಿಃ-**

ನಿಪಿ-70 ರಲ್ಲಿ ಇರುವ ಪೋಟೋ ನನ್ನದೆ. ನಿಪಿ-69 ರಲ್ಲಿ ಇರುವ ಪೋಟೋ ಗೊತ್ತಿಲ್ಲ. ನಿಪಿ-69 ಮತ್ತು ನಿಪಿ-70 ರಲ್ಲಿ ಇರುವ ಸಹಿ ನನ್ನದಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು-ಮಧುಗಿರಿ.**